ರಾಜ್ಯ ಒಕ್ಕಲಿಗರ ಸಂಘದ ಕೊಡುಗೆ



# ಒಕ್ಕಲಿಗರ ಪತ್ರಿಕೆ



ಸಂಪುಟ–15 । ಸಂಚಿಕೆ–8 । ಮಾರ್ಚ್ 2024

VOLUME 15 | ISSUE 8 | KARKAN/2010/37125 BANGALORE | MARCH 2024 | PRICE: Rs. 10/-

### ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಹಳೆಯ ವಿದ್ಯಾರ್ಥಿಗಳ ಸಂಘದಿಂದ

## 44ನೇ ಸಂಸ್ಥಾಪಕರ ದಿನಾಚರಣೆ



### ಕಾಲೇಜು ಶಿಕ್ಷಣದ ಹೊಸ್ತಿಲಲ್ಲಿರುವ ವಿದ್ಯಾರ್ಥಿಗಳಿಗೆ

## ರಾಜ್ಯ ಒಕ್ಕಲಿಗರ ಸಂಘದ ಶೈಕ್ಷಣಿಕ ಸಂಸ್ಥೆಗಳು

ಒಂದು ಕಿರು ಪರಿಚಯ













ಒಕ್ಕಲಿಗರ ಪತ್ರಿಕೆ

ಸಂಪುಟ-15 । ಸಂಚಿಕೆ-8 । ಮಾರ್ಚ್ 2024

ಪ್ರಧಾನ ಸಂಪಾದಕರು

ಶ್ರೀ ಡಿ. ಹನುಮಂತಯ್ಯ
ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ

ಸಂಪಾದಕೀಯ ಮಂಡಳಿ

ಶ್ರೀ ಬಿ. ಕೆಂಚಪ್ಪಗೌಡರು
ಶ್ರೀ ಎಲ್. ಶ್ರೀನಿವಾಸ್
ಶ್ರೀ ಸಿ. ದೇವರಾಜು (ಹಾಪ್‌ಕಾಮ್ಸ್)
ಶ್ರೀ ಹೆಚ್.ಸಿ. ಜಯಮುತ್ತು
ಶ್ರೀ ವೆಂಕಟರಾಮೇಗೌಡ
ಶ್ರೀ ಸಿ.ಎಂ. ಮಾರೇಗೌಡ
ಶ್ರೀ ಎಲುವಳ್ಳಿ ಎನ್. ರಮೇಶ್
ಶ್ರೀ ಬಿ.ಪಿ. ಮಂಜೇಗೌಡ
ಶ್ರೀ ಬಿ.ವಿ. ರಾಜಶೇಖರ ಗೌಡ

ಸಂಪಾದಕರು
ಶ್ರೀ ಆನಂದ್ ಕುಮಾರ್ ಎಸ್.

ಸಹಕಾರ
ಪ್ರೊ. ಬೊಮ್ಮೇಗೌಡ
ಸಹಾಯಕ ಪ್ರಾಧ್ಯಾಪಕರು
ವಿ.ವಿ.ಪುರಂ ಕಲೆ ಮತ್ತು ವಾಣಿಜ್ಯ ಕಾಲೇಜು

ವಿನ್ಯಾಸ
ಪ್ರಶಾಂತ್

ತಾಂತ್ರಿಕ ಸಹಾಯ
ಸಚಿನ್ ವಿ.ವಿ.

ಕಛೇರಿ ವಿಳಾಸ

ಒಕ್ಕಲಿಗರ ಪತ್ರಿಕೆ
ನಾಡಪ್ರಭು ಕೆಂಪೇಗೌಡ ಭವನ
# 148, ರಾಜ್ಯ ಒಕ್ಕಲಿಗರ ಸಂಘ
ಕೆ. ಆರ್. ರಸ್ತೆ
ಬೆಂಗಳೂರು-04
rvsmediacell@gmail.com

# ಸಂಪಾದಕೀಯ



## "ನಾಡಿನ ಸಮಸ್ತರಿಗೆ ಯುಗಾದಿ ಹಬ್ಬದ ಶುಭಾಶಯಗಳು"

ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಹಳೆಯ ವಿದ್ಯಾರ್ಥಿಗಳ ಸಂಘದಿಂದ 44ನೇ ಸಂಸ್ಥಾಪಕರ ದಿನಾಚರಣೆಯು ಯಶಸ್ವಿಯಾಗಿ ನಡೆಯಿತು.

ನಮ್ಮ ಸಂಘದ ಶಿಕ್ಷಣ ಸಂಸ್ಥೆಯಾದ ಬಿಐಟಿ ಎರಡು ದಿನಗಳ ಕೈಗಾರಿಕಾ ಶೈಕ್ಷಣಿಕ ಮತ್ತು ಹಳೆಯ ವಿದ್ಯಾರ್ಥಿಗಳ ಏಕೀಕರಣ ಶೃಂಗಸಭೆ-2024 ಅನ್ನು ಆಯೋಜಿಸಿತ್ತು. ಈ ಶೃಂಗಸಭೆಯಲ್ಲಿ ದೇಶಾದ್ಯಂತದ ಉದ್ಯಮಿಗಳು, ಆವಿಷ್ಕಾರಕರು ಮತ್ತು ಪ್ರವರ್ತಕರನ್ನು ಒಟ್ಟುಗೂಡಿಸುವುದು ಗುರಿಯಾಗಿತ್ತು. ಪ್ರೊ. ಎಂ.ವಿ. ರಾಜೀವ್ ಗೌಡ ಮಾತನಾಡಿ, ಬಿಐಟಿ ಸಂಸ್ಥೆಯನ್ನು ಶ್ಲಾಘಿಸಿದ ಅವರು, ಎಲ್ಲೆಡೆಯಿಂದ ಆವಿಷ್ಕಾರಕರು ಬೆಂಗಳೂರಿಗೆ ವಲಸೆ ಬರುವುದರಿಂದ ವಿದ್ಯಾರ್ಥಿಗಳು ಇಲ್ಲಿ ಅಧ್ಯಯನ ಮಾಡಲು ಅದೃಷ್ಟವಂತರು ಎಂದು ಹೇಳುತ್ತಾ ಅವಕಾಶವನ್ನು ಉತ್ತಮವಾಗಿ ಬಳಸಿಕೊಳ್ಳುವಂತೆ ಕರೆ ನೀಡಿದರು.

ಬೆಂಗಳೂರು ತಾಂತ್ರಿಕ ಮಹಾ ವಿದ್ಯಾಲಯದ ವತಿಯಿಂದ ಬಿ.ಐ.ಟಿ.ಯ ಒಳಾಂಗಣ ಕ್ರೀಡಾಂಗಣದಲ್ಲಿ ದಿನಾಂಕ 18.2.2024 ರಂದು ಆಯೋಜಿಸಲಾಗಿದ್ದ ಪುರುಷರ ಅಂತರ ಕಾಲೇಜು ಕಬಡ್ಡಿ ಪಂದ್ಯಾವಳಿಯು ಯಶಸ್ವಿಯಾಗಿ ನಡೆಯಿತು.

ಸಾಂಸ್ಕೃತಿಕ ಹಾಗೂ ಉನ್ನತವಾದ ಆರೋಗ್ಯ ಸೇವೆಗಳನ್ನು ಒದಗಿಸುವ ಸದುದ್ದೇಶದಿಂದ 2020ರಲ್ಲಿ ಪ್ರಾರಂಭವಾದ ಕೆಂಗಲ್ ಹನುಮಂತಯ್ಯ ಭೌತ ಚಿಕಿತ್ಸಾ ಮಹಾವಿದ್ಯಾಲಯ (ಕೆ.ಹೆಚ್.ಐ.ಪಿ.ಟಿ.)ವು ಹುಟ್ಟಿನಿಂದ ವೃದ್ಧಾಪ್ಯದವರೆಗಿನ ಸಂಜೀವಿನಿಯಾಗಿರುವ ಫಿಸಿಯೋಥೆರಪಿ ಚಿಕಿತ್ಸೆಯ ಉನ್ನತ ವ್ಯಾಸಂಗ ನೀಡುತ್ತಿದ್ದು, ಇಲ್ಲಿ ಸುಸಜ್ಜಿತವಾದ ಹೊರರೋಗಿ ವಿಭಾಗ (ಓ.ಪಿ.ಡಿ) ಸೌಲಭ್ಯವಿದ್ದು, ಬಿ.ಪಿ.ಟಿ. ವ್ಯಾಸಂಗ ಮಾಡುತ್ತಿರುವ ಸಮರ್ಥ ವಿದ್ಯಾರ್ಥಿಗಳಿಗೆ ಫಿಸಿಯೋಥೆರಪಿ ಉತ್ತಮವಾದ ವೃತ್ತಿಯಾಗಿದ್ದು ಅವರ ಭವಿಷ್ಯ ಉಜ್ವಲ ಹಾಗೂ ಸದೃಢವಾಗಿದೆ.

ಹಳ್ಳಿಗಾಡಿನಿಂದ ಬರುವಂತಹ ರೈತಾಪಿ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವುದೇ ಪ್ರಧಾನ ಗುರಿಯಾಗಿಸಿಕೊಂಡು ಸ್ಥಾಪನೆಯಾದ ವಿಶ್ವೇಶ್ವರಪುರ ವಿಜ್ಞಾನ ಕಾಲೇಜು, ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಹೊಂದಿದ್ದು, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಕ ಸಮುದಾಯ ಸದಾ ಶ್ರಮಿಸುತ್ತಿದ್ದಾರೆ.

ಸಂಘದ ಅಧೀನ ಸಂಸ್ಥೆಗಳಲ್ಲಿ ಒಂದಾದ ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಹಗಲು ಪದವಿ ಪೂರ್ವ ಕಾಲೇಜು ಮತ್ತು ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಸಂಜೆ ಪದವಿ ಪೂರ್ವ ಕಾಲೇಜು ಕಾಯಾ ವಾಚಾ ಮನಸಾ ಕಾರ್ಯನಿರ್ವಹಿಸಲು ಕಂಕಣಬದ್ಧರಾಗಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಒಳಗೊಂಡ ಸುಸಜ್ಜಿತ ವಿದ್ಯಾಮಂದಿರವಾಗಿದ್ದು, ನಮ್ಮ ವಿದ್ಯಾಸಂಸ್ಥೆಯಲ್ಲಿ ಅಭ್ಯಾಸಮಾಡಿದ ಹಲವು ವಿದ್ಯಾರ್ಥಿಗಳು ಸರ್ಕಾರದ ಹಲವಾರು ಇಲಾಖೆಗಳಲ್ಲಿ ಉನ್ನತ ಪದವಿಗಳನ್ನು ಅಲಂಕರಿಸಿರುತ್ತಾರೆ. ಇನ್ನೂ ಕೆಲವರು ಸಮಾಜ ಸೇವಕರಾಗಿ, ಉದ್ಯಮಿಗಳಾಗಿ, ರಾಜಕಾರಣಿಗಳಾಗಿ, ಕಲಾವಿದರಾಗಿ, ಸಾಧನೆಯನ್ನು ಮಾಡಿದ್ದಾರೆ ಎಂದು ಹೇಳುವುದಕ್ಕೆ ಹೆಮ್ಮೆಯಾಗುತ್ತದೆ.

1982-1983 ಶೈಕ್ಷಣಿಕ ಸಾಲಿನಲ್ಲಿ ಬಡ ಮಕ್ಕಳಿಗೆ, ಮಧ್ಯಮವರ್ಗದ ವಿದ್ಯಾರ್ಥಿಗಳಿಗೆ ಸುಲಭ ದರದಲ್ಲಿ ವಿದ್ಯಾಭ್ಯಾಸ ನೀಡುವ ದೂರದೃಷ್ಟಿಯಿಂದ ಪ್ರಾರಂಭವಾದ ನಮ್ಮ ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು ವರ್ಷದಿಂದ ವರ್ಷಕ್ಕೆ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳುತ್ತಿದೆ. ಮುಂದೊಂದು ದಿನ ರಾಜ್ಯ ಒಕ್ಕಲಿಗರ ಸಂಘಕ್ಕೆ ಈ ಪದವಿಪೂರ್ವ ಕಾಲೇಜು ಕಿರೀಟಪ್ರಾಯವಾಗುತ್ತದೆ.

**ಶ್ರೀ ಡಿ. ಹನುಮಂತಯ್ಯ**
ಪ್ರಧಾನ ಸಂಪಾದಕರು

# ಬೆಂಗಳೂರು ತಾಂತ್ರಿಕ ಮಹಾ ವಿದ್ಯಾಲಯದ ಕೈಗಾರಿಕಾ ಶೈಕ್ಷಣಿಕ ಮತ್ತು ಹಳೆಯ ವಿದ್ಯಾರ್ಥಿಗಳ

# ಏಕೀಕರಣ ಶೃಂಗಸಭೆ-2024





**ಶ್ರೀ ಎಸ್.ಕೆ. ಧರ್ಮೇಶ್ ಸಿರಿಬೈಲ್**
ಅಧ್ಯಕ್ಷರು
ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ

**ಡಾ. ಅಶ್ವತ್ಥ್ ಎಂ.ಯು.**
ಪ್ರಾಂಶುಪಾಲರು
ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ



ರಾಜ್ಯ ಒಕ್ಕಲಿಗರ ಸಂಘದ ಶಿಕ್ಷಣ ಸಂಸ್ಥೆಯಾದ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಐಟಿ) ಎರಡು ದಿನಗಳ ಕೈಗಾರಿಕಾ ಶೈಕ್ಷಣಿಕ ಮತ್ತು ಹಳೆಯ ವಿದ್ಯಾರ್ಥಿಗಳ ಏಕೀಕರಣ ಶೃಂಗಸಭೆ – 2024 ಅನ್ನು ಫೆಬ್ರವರಿ 23, 2024 ರಂದು, ಬಿಐಟಿ ಕ್ಯಾಂಪಸ್ಸಿನ ಕುವೆಂಪು ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿತ್ತು. ಈ ಶೃಂಗಸಭೆಯಲ್ಲಿ ದೇಶಾದ್ಯಂತದ ಉದ್ಯಮಿಗಳು, ಆವಿಷ್ಕಾರಕರು ಮತ್ತು ಪ್ರವರ್ತಕರನ್ನು ಒಟ್ಟುಗೂಡಿಸುವುದು ಗುರಿಯಾಗಿತ್ತು, ಇದರಿಂದ ಒಳನೋಟದ ಚರ್ಚೆ, ಫಲಪ್ರದ ನೆಟ್‌ವರ್ಕಿಂಗ್ ಮತ್ತು ಸಕಾರಾತ್ಮಕ ಬದಲಾವಣೆಯನ್ನು ಚಾಲನೆಗೊಳಿಸಲು ವಿನ್ಯಾಸಗೊಳಿಸಲಾಗಿದೆ.

ಸಂಶೋಧನೆ ಮತ್ತು ನಾವೀನ್ಯತೆ, ಭವಿಷ್ಯದ ಕಾರ್ಯಪಡೆಗೆ ಕೌಶಲ್ಯಗಳು, ನವೋದ್ಯಮ ಮತ್ತು ಉದ್ಯಮಶೀಲತೆ, ಉದ್ಯಮಕ್ಕೆ ಪ್ರತಿಭೆಯ ಅಗತ್ಯಗಳು ಮತ್ತು ಹಳೆಯ ವಿದ್ಯಾರ್ಥಿಗಳ ಸಂವಾದದ ವಿಷಯಗಳ ಅಡಿಯಲ್ಲಿ, ಶೃಂಗಸಭೆಯು ಚಿಂತನಶೀಲ ಉಪಕ್ರಮಗಳು ಮತ್ತು ಒಳನೋಟಗಳಿಗೆ ವೇದಿಕೆಯನ್ನು ಒದಗಿಸಿತು. ಆಯಾ ಕ್ಷೇತ್ರಗಳ ತಜ್ಞರ ನೇತೃತ್ವದಲ್ಲಿ ಪ್ಯಾನಲ್ ಚರ್ಚೆಗಳು ಮತ್ತು ಸಂವಾದಾತ್ಮಕ ಸೆಷನ್ ಗಳಲ್ಲಿ ತೊಡಗಿಸಿಕೊಳ್ಳಲು ಸ್ಪರ್ಧಿಗಳಿಗೆ ಅವಕಾಶವಿತ್ತು. ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ, ಆರೋಗ್ಯ, ಶಿಕ್ಷಣ ಮತ್ತು ಸ್ಟಾರ್ಟ್ ಆಪ್‌ಗಳ ಭವಿಷ್ಯವನ್ನು ರೂಪಿಸುವ ಇತ್ತೀಚಿನ ಪ್ರಗತಿ ಮತ್ತು ಪ್ರವೃತ್ತಿಗಳನ್ನು ಎತ್ತಿ ತೋರಿಸುವ ವ್ಯಾಪಕ ಶ್ರೇಣಿಯ ಅತ್ಯಾಧುನಿಕ ತಂತ್ರಜ್ಞಾನಗಳು, ಉತ್ಪನ್ನಗಳು, ಪರಿಹಾರಗಳನ್ನು ಪ್ರದರ್ಶಿಸುವ 100ಕ್ಕೂ ಹೆಚ್ಚು ಮಳಿಗೆಗಳ ಪ್ರದರ್ಶನವನ್ನು ಶೃಂಗಸಭೆ ಒಳಗೊಂಡಿತ್ತು. ಈ ಸಂದರ್ಭದಲ್ಲಿ ಸಂಸ್ಥೆಯು 13 ಕಂಪನಿಗಳೊಂದಿಗೆ ಒಡಂಬಡಿಕೆಗಳಿಗೆ ಸಹಿ ಹಾಕಿದೆ. ವಿದ್ಯಾರ್ಥಿಗಳು, ಪೋಷಕರು ಮತ್ತು ಉದ್ಯಮಿಗಳು ಸೇರಿದಂತೆ 5000ಕ್ಕೂ ಹೆಚ್ಚು ಜನರು ಶೃಂಗಸಭೆಯಲ್ಲಿ ಭಾಗವಹಿಸಿದ್ದರು.

ಮುಖ್ಯ ಅತಿಥಿಯಾಗಿ ಯೋಜನಾ ಆಯೋಗದ ಉಪಾಧ್ಯಕ್ಷ ಹಾಗೂ ಮಾಜಿ ಸಂಸದರಾದ ಪ್ರೊ. ಎಂ.ವಿ. ರಾಜೀವ್ ಗೌಡ ಮಾತನಾಡಿ, ಬಲವಾದ ಸಂಪರ್ಕಗಳನ್ನು ನಿರ್ಮಿಸುವಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘದ ಮಹತ್ವವನ್ನು ಒತ್ತಿ ಹೇಳುತ್ತಾ "ಹಳೆಯ ವಿದ್ಯಾರ್ಥಿಗಳು ವಿಸ್ತೃತ ಕುಟುಂಬವಾಗಿದ್ದು, ಮಾರ್ಗದರ್ಶಕರು ಮತ್ತು ಮಾರ್ಗದರ್ಶಕರ ಪಾತ್ರವನ್ನು ನಿರ್ವಹಿಸುತ್ತಾರೆ" ಎಂದರು. ಬಿಐಟಿ ಸಂಸ್ಥೆಯನ್ನು ಶ್ಲಾಘಿಸಿದ ಅವರು, ಎಲ್ಲೆಡೆಯಿಂದ ಆವಿಷ್ಕಾರಕರು ಬೆಂಗಳೂರಿಗೆ ವಲಸೆ ಬರುವುದರಿಂದ ವಿದ್ಯಾರ್ಥಿಗಳು ಇಲ್ಲಿ ಅಧ್ಯಯನ ಮಾಡಲು ಅದೃಷ್ಟವಂತರು ಎಂದು ಹೇಳುತ್ತಾ ಅವಕಾಶವನ್ನು ಉತ್ತಮವಾಗಿ ಬಳಸಿಕೊಳ್ಳುವಂತೆ ಕರೆ ನೀಡಿದರು.







ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಟಿಐಇ ಬೆಂಗಳೂರು ಅಧ್ಯಕ್ಷ, ಬ್ರಿಡ್ಜ್ ನ ಸ್ಥಾಪಕ ಮತ್ತು ಸಿಇಒ ಮದನ್ ಪಡಕಿ, ವ್ಯಕ್ತಿಯ ಆಂತರಿಕ ಮತ್ತು ಬಾಹ್ಯ ಗುಣಲಕ್ಷಣಗಳ ಅಭಿವೃದ್ಧಿಗೆ 8ಸಿ ಗಳ ಮಹತ್ವವನ್ನು ಒತ್ತಿ ಹೇಳಿದರು. ವಿಶ್ವಾಸ, ಸಂವಹನ, ಸಹಾನುಭೂತಿ, ಸಾಂವಿಧಾನಿಕ ಮೌಲ್ಯಗಳು, ಸೃಷ್ಟಿಕರ್ತ, ಹವಾಮಾನ, ಚಾಟ್ ಜಿಪಿಟಿ ಜಾಗೃತಿ ಮತ್ತು ಸಮುದಾಯ ನಿರ್ಮಾಣಕಾರರಂತಹ ಗುಣಗಳನ್ನು ಅಳವಡಿಸಿಕೊಳ್ಳುವಂತೆ ಅವರು ಕರೆ ನೀಡಿದರು.

ಆರ್.ವಿ.ಎಸ್. ನ ಗೌರವಾಧ್ಯಕ್ಷರಾದ ಶ್ರೀ ಬಿ. ಕೆಂಚಪ್ಪಗೌಡ ರವರು ಮಾತನಾಡಿ, ಕಳೆದ 40 ವರ್ಷಗಳಿಂದ ಈ ಸಂಸ್ಥೆಯು ಪ್ರವರ್ಧಮಾನಕ್ಕೆ ಬಂದಿದ್ದು, ಹಳೆಯ ವಿದ್ಯಾರ್ಥಿಗಳು ಉದ್ಯಮವನ್ನು ಮುನ್ನಡೆಸುತ್ತಿದ್ದಾರೆ ಮತ್ತು ಯುವ ಮನಸ್ಸುಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ ಎಂದರು. ಅಧ್ಯಕ್ಷೀಯ ಭಾಷಣ ಮಾಡಿದ ಶ್ರೀ ಎಸ್.ಕೆ. ಧರ್ಮೇಶ್ ಸಿರಿಬೈಲ್‌ರವರು, ಈ ಶೃಂಗಸಭೆಯು ಶೈಕ್ಷಣಿಕ ಮತ್ತು ಉದ್ಯಮದ ನಡುವಿನ ಬಂಧವನ್ನು ಬಲಪಡಿಸಲು ಕೊಡುಗೆಯಾಗಿದೆ, ಇದು ಜಾಗತಿಕವಾಗಿ ವಿದ್ಯಾರ್ಥಿಗಳಿಗೆ ವೃತ್ತಿ ಅವಕಾಶವನ್ನು ಹೆಚ್ಚಿಸುತ್ತದೆ ಎಂದರು. ಆರ್.ವಿ.ಎಸ್. ಉಪಾಧ್ಯಕ್ಷ ಎಲ್. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಎಚ್.ಸಿ. ಜಯಮುತ್ತು, ಖಜಾಂಚಿ ಸಿ.ಎಂ. ಮಾರೇಗೌಡ, ಹಾಪ್‌ಕಾಮ್ಸ್ ಉಪಾಧ್ಯಕ್ಷ ಸಿ. ದೇವರಾಜು, ಜಂಟಿ ಕಾರ್ಯದರ್ಶಿ ವೆಂಕಟರಾಮೇಗೌಡ, ಡಾ. ರಮೇಶ್, ಡಾ. ರಾಮನ್, ರಘು, ಅನುಪ್ರಿಯಾ, ಕುಮಾರ್ ನಾಗರಾಜ್, ಶಿವಾನಂದ್ ವೇದಿಕೆಯಲ್ಲಿದ್ದು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಿಶ್ವೇಶ್ವರಯ್ಯ ತಂತ್ರಜ್ಞಾನ ವಿಶ್ವವಿದ್ಯಾಲಯ ಅಂತರ ಕಾಲೇಜು ಬೆಂಗಳೂರು ವಿಭಾಗದ ಕಬಡ್ಡಿ ಪುರುಷರ ಪಂದ್ಯಾವಳಿ

ಬೆಂಗಳೂರು ತಾಂತ್ರಿಕ ಮಹಾ ವಿದ್ಯಾಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ವತಿಯಿಂದ ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ಕಬಡ್ಡಿ ಪಂದ್ಯಾವಳಿಯನ್ನು ದಿನಾಂಕ 18ನೇ ಫೆಬ್ರವರಿ 2024 ರಂದು ಬಿ.ಐ.ಟಿ.ಯ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಪಂದ್ಯಾವಳಿಯನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಬೆಂಗಳೂರು ಕೇಂದ್ರ ವಲಯದ ಪ್ರಾದೇಶಿಕ ನಿರ್ದೇಶಕರು ಶೋಬಿತ ಭಾರದ್ವಾಜ್ ಅವರು ಕಾರ್ಯಕ್ರಮವನ್ನು ಜ್ಯೋತಿ ಬೆಳಗುವ ಮೂಲಕ ವಿದ್ಯುಕ್ತವಾಗಿ ಚಾಲನೆ ನೀಡಿ ಉದ್ಘಾಟನಾ ಸಮಾರಂಭವನ್ನು ಯಶಸ್ವಿಗೊಳಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಬೆಂಗಳೂರು ತಾಂತ್ರಿಕ ಮಹಾ ವಿದ್ಯಾಲಯದ ಪ್ರಾಂಶುಪಾಲರು ಡಾ. ಅಶ್ವತ್ ಎಂ.ಯು., ಬೆಂಗಳೂರು ತಾಂತ್ರಿಕ ಮಹಾ ವಿದ್ಯಾಲಯದ ಕ್ರೀಡಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಆದ ಡಾ. ಎ.ಆರ್. ಹೇಮಂತ್ ಕುಮಾರ್, ಬೆಂಗಳೂರು ತಾಂತ್ರಿಕ ಮಹಾ ವಿದ್ಯಾಲಯದ ಕ್ರೀಡಾ ಅಭಿವೃದ್ಧಿ ಸಮಿತಿಯ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.







# ಕೆಂಗಲ್ ಹನುಮಂತಯ್ಯ ಭೌತ ಚಿಕಿತ್ಸಾ ಮಹಾವಿದ್ಯಾಲಯ (ಕೆ.ಹೆಚ್.ಐ.ಪಿ.ಟಿ)

**ಶ್ರೀಗಂಧದಕಾವಲು, ನಾಗರಭಾವಿ, 2ನೇ ಹಂತ, ಬೆಂಗಳೂರು 560 091**



**ಶ್ರೀ ಬಿ.ಪಿ. ಮಂಜೇಗೌಡ**
**ಕಾರ್ಯಾಧ್ಯಕ್ಷರು**
**ಅಧ್ಯಕ್ಷರು,** ಶ್ರೀಗಂಧದಕಾವಲು ವಿದ್ಯಾಸಂಸ್ಥೆಗಳು,
ಫಾರ್ಮಸಿ, ಕೆ.ಐ.ಪಿ.ಟಿ ಮತ್ತು ಕೆ.ಹೆಚ್.ಐ.ಪಿ

**ಡಾ. ರಚನ ಶೆಟ್ಟಿ ಬಿ.ವಿ.**
**ಪ್ರೊಫೆಸರ್/ಪ್ರಾಂಶುಪಾಲರು**
ಕೆಂಗಲ್ ಹನುಮಂತಯ್ಯ ಭೌತ ಚಿಕಿತ್ಸಾ ಮಹಾವಿದ್ಯಾಲಯ
ಶ್ರೀಗಂಧದಕಾವಲು, ನಾಗರಭಾವಿ 2ನೇ ಹಂತ, ಬೆಂಗಳೂರು - 91





ರಾಜ್ಯ ಒಕ್ಕಲಿಗರ ಸಂಘವು 1906ರಲ್ಲಿ ಶಿಕ್ಷಣ, ಸಾಂಸ್ಕೃತಿಕ ಹಾಗು ಉನ್ನತವಾದ ಆರೋಗ್ಯ ಸೇವೆಗಳನ್ನು ಒದಗಿಸುವ ಸದುದ್ದೇಶದಿಂದ ಪ್ರಾರಂಭವಾಗಿದ್ದು, ಶ್ರೀಗಂಧದ ಕಾವಲಿನಲ್ಲಿರುವ ಕೆಂಗಲ್ ಹನುಮಂತಯ್ಯ ಭೌತ ಚಿಕಿತ್ಸಾ ಮಹಾವಿದ್ಯಾಲಯ (ಕೆ.ಹೆಚ್.ಐ.ಪಿ.ಟಿ) ಈ ಬೃಹತ್ ಆಲದ ಮರದ ಒಂದು ಬಿಳಲು.



ರಾಜ್ಯ ಒಕ್ಕಲಿಗರ ಸಂಘವು ಶ್ರೀಗಂಧದ ಕಾವಲಿನ ಆವರಣದಲ್ಲಿ ಫಿಸಿಯೋಥೆರಪಿ ಕಾಲೇಜು ಮತ್ತು ಉತ್ತಮ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಕೆಂಗಲ್ ಹನುಮಂತಯ್ಯ ಭೌತ ಚಿಕಿತ್ಸಾ ಮಹಾ ವಿದ್ಯಾಲಯವನ್ನು ಪ್ರಾರಂಭಿಸಲು ನಿರ್ಣಯ ಕೈಗೊಂಡು 2018–19ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಹಾಗು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಅನುಮೋದನೆ ಪಡೆದ ನಂತರ 2020ರಲ್ಲಿ ಕೆ.ಹೆಚ್.ಐ.ಪಿ.ಟಿ. ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ನಮ್ಮ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀಯುತ ಬಿ.ಪಿ. ಮಂಜೇಗೌಡ ಅವರ ಕನಸಿನ ಕೂಸಾದ ಈ ಸಂಸ್ಥೆಯನ್ನು ಅವರ ಮಾರ್ಗದರ್ಶನದಲ್ಲಿ ಪ್ರಾಂಶುಪಾಲರಾದ ಡಾ. ರಚನ ಶೆಟ್ಟಿ ಬಿ.ವಿ.ರವರು ಐದನೇ ವರ್ಷದತ್ತ ಮುನ್ನಡೆಸುತ್ತಿದ್ದಾರೆ. ಇಂದು ಸುಮಾರು 100 ವಿದ್ಯಾರ್ಥಿಗಳು ಜ್ಞಾನಾರ್ಜನೆಗಾಗಿ ನಮ್ಮ ಸಂಸ್ಥೆಯಲ್ಲಿ ಬಿ.ಪಿ.ಟಿ. ವ್ಯಾಸಂಗ ಮಾಡುತ್ತಿದ್ದಾರೆ. ಇದಕ್ಕೆ ರಾಜ್ಯ ಒಕ್ಕಲಿಗರ ಸಂಘದ ಆಡಳಿತ ಮಂಡಳಿಯು ಶ್ರೀಗಂಧದ ಕಾವಲಿನ ಕೆ.ಹೆಚ್.ಐ.ಪಿ.ಟಿ. ಸಂಸ್ಥೆಯ ಪ್ರಗತಿಗೆ ಬೆನ್ನೆಲುಬಾಗಿರುತ್ತಾರೆ.

**ಫಿಸಿಯೋಥೆರಪಿ ಕಾಲೇಜಿನ ಸೌಲಭ್ಯಗಳು:**

- **ಹೊರರೋಗಿ ವಿಭಾಗ (ಓ.ಪಿ.ಡಿ)**

ಕೆ.ಹೆಚ್.ಐ.ಪಿ.ಟಿ.ಯಲ್ಲಿ ಸುಸಜ್ಜಿತವಾದ ಓ.ಪಿ.ಡಿ ಸೌಲಭ್ಯವಿದ್ದು, ಸುಮಾರು 4 ವರ್ಷಗಳಿಂದ ನುರಿತ ಫಿಸಿಯೋಥೆರಪಿಸ್ಟ್‌ಗಳು



ಉತ್ತಮ ಫಿಸಿಯೋಥೆರಪಿ ಚಿಕಿತ್ಸೆಯನ್ನು ಕೈಗೆಟುಕುವ ದರದಲ್ಲಿ ನೀಡುತ್ತಿರುವುದರಿಂದ ಮಾಗಡಿ ರಸ್ತೆ, ಕೆಂಗೇರಿ, ನಾಗರಭಾವಿ, ಸುಂಕದಕಟ್ಟೆ, ಲಗ್ಗೆರೆ ಭಾಗದ ಜನರಿಗೆ ಅನುಕೂಲಕರವಾಗಿದೆ. ಇಲ್ಲಿನ ಫಿಸಿಯೋಥೆರಪಿ ಓ.ಪಿ.ಡಿ.ಯಲ್ಲಿ ಆರ್ಥೋ, ನ್ಯೂರೋ, ಕಾರ್ಡಿಯೋ, ಪೀಡಿಯಾಟ್ರಿಕ್ ವಿಭಾಗದಲ್ಲಿ, ಬೆನ್ನು ನೋವು, ಮಂಡಿ ನೋವು, ಫ್ರಾಕ್ಚರ್ ನಂತರ, ಸ್ಟ್ರೋಕ್ ನಂತರ, ಕೋವಿಡ್ ನಂತರ, ಕುಂಠಿತ ಬೆಳವಣಿಗೆ/ಬುದ್ಧಿಮಾಂದ್ಯ ಮಕ್ಕಳಿಗೆ ಹಾಗು ಇಂತಹ ಸಮಸ್ಯೆಗಳಿಗೆ ಉತ್ತಮ ಚಿಕಿತ್ಸೆ ನೀಡಲಾಗುತ್ತಿದೆ.

- **ಕಾಲೇಜಿನ ಬಗ್ಗೆ :**

ಶ್ರೀಗಂಧದಕಾವಲಿನ ಕೆ.ಹೆಚ್.ಐ.ಪಿ.ಟಿ. ಕಾಲೇಜಿನಲ್ಲಿ ವಿದ್ಯಾರ್ಥಿಗಳ ಜ್ಞಾನಾರ್ಜನೆಗಾಗಿ ಉತ್ತಮವಾದ ಪರಿಸರವಿದ್ದು ಮಕ್ಕಳ ಕಲಿಕೆಗೆ ಪೂರಕವಾಗಿದೆ. ತರಗತಿಗಳು ಪರಿಣಾಮಕಾರಿಯಾಗಿ ಕಲಿಸಲು ಪ್ರೊಜೆಕ್ಟರ್ ಹಾಗೂ ಇತರ ಆಡಿಯೋ ದೃಶ್ಯ ಘಟಕಗಳನ್ನು ಅಳವಡಿಸಿಕೊಳ್ಳಲಾಗಿದೆ. ಶ್ರೀಗಂಧದಕಾವಲಿನ ಕೆಂಗಲ್ ಹನುಮಂತಯ್ಯ ಆಸ್ಪತ್ರೆಯ ಆವರಣದಲ್ಲಿರುವ ಕೆ.ಹೆಚ್.ಐ.ಪಿ.ಟಿ. ವಿದ್ಯಾಲಯವು ಅತ್ಯುತ್ತಮವಾದ ಗ್ರಂಥಾಲಯ ಹಾಗೂ ಪ್ರಯೋಗಾಲಯವನ್ನು ಹೊಂದಿರುತ್ತದೆ. ವಿದ್ಯಾರ್ಥಿಗಳಿಗೆ ಕೆ.ಹೆಚ್.ಐ.ಪಿ.ಟಿ.ಯಲ್ಲಿ ನುರಿತ ತಜ್ಞ ಫಿಸಿಯೋಥೆರಪಿಸ್ಟ್‌ಗಳ ಮಾರ್ಗದರ್ಶನದಲ್ಲಿ ತರಗತಿಗಳು ನಡೆಯುತ್ತವೆ. ಇಲ್ಲಿನ ವಿದ್ಯಾರ್ಥಿಗಳಿಗೆ ವೈದ್ಯಕೀಯ ತರಗತಿಗಳು ಬನಶಂಕರಿಯ ಕಿಮ್ಸ್ ಕಾಲೇಜು ಆವರಣದಲ್ಲಿ ಹಾಗೂ ಕಿಮ್ಸ್ ಆಸ್ಪತ್ರೆಯ ತಜ್ಞ ವೈದ್ಯರಿಂದ ನಡೆಯುತ್ತದೆ. ವಿದ್ಯಾರ್ಥಿಗಳು ಕೆ.ಹೆಚ್.ಐ.ಪಿ.ಟಿ. ಓ.ಪಿ.ಡಿ, ಕಿಮ್ಸ್ ಆಸ್ಪತ್ರೆ, ವೃದ್ಧಾಶ್ರಮಗಳಿಗೆ ಕ್ಲಿನಿಕಲ್ ತರಬೇತಿಗಾಗಿ ಕಾಲೇಜು ಬಸ್ಸಿನಲ್ಲಿ ತೆರಳುತ್ತಾರೆ. ಇದರಿಂದ ವಿದ್ಯಾರ್ಥಿಗಳಿಗೆ ಚಿಕಿತ್ಸೆ ನೀಡುವಲ್ಲಿ ಆತ್ಮವಿಶ್ವಾಸ ವೃದ್ಧಿಸುತ್ತದೆ. ವಿದ್ಯಾರ್ಥಿಗಳನ್ನು ಫಿಸಿಯೋಥೆರಪಿ ಕಾನ್ಫರೆನ್ಸ್, ಸಂಶೋಧನ ಚರ್ಚೆಗಳಲ್ಲಿ, ಅದಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದರಿಂದ ವಿದ್ಯಾರ್ಥಿಗಳಲ್ಲಿ ಸರ್ವತೋಮುಖ ಅಭಿವೃದ್ಧಿಯನ್ನು ಕಾಣಬಹುದಾಗಿದೆ.

- **ಬಿ.ಪಿ.ಟಿ (Bachelor of Physiotherapy) ಕೋರ್ಸ್‌ನ ವಿವರ:**

ಬಿ.ಪಿ.ಟಿ(Bachelor of Physiotherapy) ಪದವಿಯು 4 ವರ್ಷ 6 ತಿಂಗಳ Internship ಕೋರ್ಸ್ ಆಗಿದ್ದು, ಕೆ.ಹೆಚ್.ಐ.ಪಿ.ಟಿ.ಯಲ್ಲಿ ಪ್ರಸ್ತುತ ಶೈಕ್ಷಣಿಕ ವರ್ಷದ ಪ್ರವೇಶಾತಿಗಳು ಏಪ್ರಿಲ್ ತಿಂಗಳಲ್ಲಿ ಪ್ರಾರಂಭವಾಗಲಿದೆ. ಪಿಯುಸಿಯಲ್ಲಿ ಪಿಸಿಎಂಬಿ ಓದಿರುವ ಮಕ್ಕಳು, ಸಿಇಟಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಈ ವೃತ್ತಿಪರ ಕೋರ್ಸ್‌ನ ಪ್ರವೇಶಕ್ಕೆ ಅರ್ಹರಾಗಿರುತ್ತಾರೆ. ಕೆ.ಹೆಚ್.ಐ.ಪಿ.ಟಿ.ಯಲ್ಲಿ 2025–26ನೇ ಶೈಕ್ಷಣಿಕ ವರ್ಷಕ್ಕೆ ಎಮ್.ಪಿ.ಟಿ. ಕೋರ್ಸ್ (ಸ್ನಾತಕೋತ್ತರ ಪದವಿ)ಯನ್ನು ಕೂಡ ಪ್ರಾರಂಭಿಸುವ ನಿಟ್ಟಿನಲ್ಲಿ ಸಿದ್ಧತೆಯು









ಆರಂಭವಾಗಿದ್ದು, ಶ್ರೀಗಂಧದಕಾವಲಿನಲ್ಲಿ ಸ್ವತಂತ್ರ ಕಾಲೇಜು ಕಟ್ಟಡದ ಸೌಕರ್ಯವನ್ನು ರಾಜ್ಯ ಒಕ್ಕಲಿಗರ ಸಂಘವು ಒದಗಿಸುತ್ತಿದೆ, ಅದಲ್ಲದೆ ವಿದ್ಯಾರ್ಥಿಗಳಿಗೆ ರಾಜ್ಯ ಒಕ್ಕಲಿಗರ ಸಂಘವು ಒಕ್ಕಲಿಗರ ಜನಾಂಗದ ಗ್ರಾಮೀಣ ಹಾಗೂ ಬಡ ವಿದ್ಯಾರ್ಥಿಗಳಿಗೆ ಉಚಿತ ಹಾಗೂ ಪಾವತಿ ವಸತಿ ನಿಲಯಗಳ ಸೌಲಭ್ಯ ಒದಗಿಸಲಾಗಿದೆ.

- **ಫಿಸಿಯೋಥೆರಪಿ ಕಿರು ಪರಿಚಯ**

ಫಿಸಿಯೋಥೆರಪಿ ಪಾಶ್ಚಾತ್ಯ ದೇಶಗಳಲ್ಲಿ ಜನಜನಿತವಾಗಿದ್ದು ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರಚಲಿತವಾಗುತ್ತಿದೆ. ಫಿಸಿಯೋಥೆರಪಿಸ್ಟ್‌ಗಳಿಗೆ ನಮ್ಮ ದೇಶದಲ್ಲದೆ ಹೊರ ದೇಶದಲ್ಲಿ ಕೂಡ ಹೆಚ್ಚಿನ ಬೇಡಿಕೆಯಿರುತ್ತದೆ. ಇಂದಿನ ಈ ಬಿಡುವಿಲ್ಲದ ಜೀವನ ಶೈಲಿಯಲ್ಲಿ ಪ್ರತಿಯೊಬ್ಬರು ಬೆನ್ನು, ಕತ್ತು, ಕಾಲು, ಭುಜದ ನೋವು ಅನುಭವಿಸುತ್ತಿರುವುದು ಸಾಮಾನ್ಯವಾಗಿದೆ. ಲಕ್ವ ಆದ ನಂತರದ ದಿನಗಳಲ್ಲಿ ಫಿಸಿಯೋಥೆರಪಿ ಚಿಕಿತ್ಸೆ ಮಹತ್ವದ ಪಾತ್ರ ವಹಿಸುತ್ತದೆ. ಕೋವಿಡ್ ಆದ ನಂತರದ ಫಿಸಿಯೋಥೆರಪಿಯ ಉಸಿರಾಟದ ವ್ಯಾಯಾಮಗಳು ಮತ್ತು ಐಸಿಯುನಲ್ಲಿ ಕೂಡ ಫಿಸಿಯೋಥೆರಪಿಸ್ಟ್‌ನ ಪಾತ್ರ ಬಹು ಮುಖ್ಯವಾಗಿರುತ್ತದೆ.

ಬದಲಾದ ಜೀವನ ಶೈಲಿಯಿಂದ ಅರವತ್ತರ ನಂತರ ಕಾಣಿಸಿಕೊಳ್ಳುತ್ತಿದ್ದ ಕಾಯಿಲೆಗಳಾದ ಮಂಡಿ, ಸೊಂಟ, ಕೀಲು ನೋವುಗಳು ಇಂದು ನಲವತ್ತರ ಆಸುಪಾಸಿನವರನ್ನೂ ಕಾಡಲಾರಂಭಿಸಿದೆ. ಇಂತಹ ಸಮಸ್ಯೆಗಳನ್ನು ನಿವಾರಣೆಗೊಳಿಸುವ ಚಿಕಿತ್ಸೆಯೇ "ಫಿಸಿಯೋಥೆರಪಿ". ಬೆಳೆಯುತ್ತಿರುವ ಜನಸಂಖ್ಯೆ ಮತ್ತು ದೀರ್ಘಕಾಲಿನ ವ್ಯಾದಿಗಳಿಂದಾಗಿ ಜಗತ್ತಿನಾದ್ಯಂತ ಆರೋಗ್ಯ ಆರೈಕೆ ನೀಡುವವರ ಮೇಲೆ ಹೆಚ್ಚಿನ ಒತ್ತಡ ಮತ್ತು ಬೇಡಿಕೆಯನ್ನು ಹಾಕುತ್ತಿದೆ. ಈ ಬೇಡಿಕೆಗಳನ್ನು ಪೂರೈಸಲು ಹೆಲ್ತ್‌ಕೇರ್ ಸರ್ವೀಸ್ ಪಾತ್ರಗಳು ಬದಲಾಗಿದ್ದು ಮತ್ತು ವಿಸ್ತರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಹುಟ್ಟಿನಿಂದ ವೃದ್ಧಾಪ್ಯದವರೆಗಿನ ಸಂಜೀವಿನಿಯಾಗಿರುವುದು ಫಿಸಿಯೋಥೆರಪಿ ಚಿಕಿತ್ಸೆ. ದೇಹದ ಸರಳ ವ್ಯಾಯಾಮ ಮತ್ತು ಎಲೆಕ್ಟ್ರೋಥೆರಪಿ ಚಿಕಿತ್ಸೆಗಳ ಮೂಲಕ ಸಂದಿ ನೋವುಗಳು, ನರರೋಗಗಳು, ಶ್ವಾಸಕೋಶ ಸಮಸ್ಯೆಗಳು, ಗರ್ಭಿಣಿ ಸ್ತ್ರೀಯರು (Antenatal), ಪ್ರಸೂತಿಯ ನಂತರ(Postnatal), ಶಸ್ತ್ರಚಿಕಿತ್ಸೆ ನಂತರ ಉಂಟಾಗುವ ಸಮಸ್ಯೆಗಳು, ನವಜಾತ ಶಿಶುಗಳಲ್ಲಿ ಉಂಟಾಗುವ ಸ್ನಾಯು ತೊಂದರೆಗಳು (ಬರ್ತ್ ಇಂಜುರೀಸ್) ಸೇರಿದಂತೆ ದೇಹದ ಪ್ರತಿ ಭಾಗದ ತೊಂದರೆಯೊಂದಿಗೆ ಎಲ್ಲಾ ವಯೋಮಾನದವರಿಗೂ ಫಿಜಿಯೋಥೆರಪಿ ಮೂಲಕ ಚಿಕಿತ್ಸೆ ನೀಡಬಹುದಾಗಿದೆ.

ಫಿಸಿಯೋಥೆರಪಿಯಲ್ಲಿ ಎಕ್ಸರ್ಸೈಜ್ ಥೆರಪಿ ಮತ್ತು ಎಲೆಕ್ಟ್ರೋ ಥೆರಪಿ ಎಂಬ ಎರಡು ಪ್ರಧಾನವಾದ ಮೂಲ ಚಿಕಿತ್ಸೆ ಪ್ರಕಾರವಾಗಿರುತ್ತದೆ. ಎಲೆಕ್ಟ್ರೋ ಥೆರಪಿಯಲ್ಲಿ ವಿದ್ಯುತ್ ಉಪಕರಣಗಳ ಮೂಲಕ ನೋವಿಗೆ ಚಿಕಿತ್ಸೆ ಹಾಗೂ ಸ್ನಾಯುಗಳಿಗೆ ಬಲ ನೀಡುವ ಚಿಕಿತ್ಸೆ ರೂಪವಾಗಿದ್ದು ಎಕ್ಸರ್ಸೈಜ್ ಥೆರಪಿಯಲ್ಲಿ ವ್ಯಾಯಾಮಗಳ ಮೂಲಕ ನೋವಿಗೆ ಚಿಕಿತ್ಸೆ ಹಾಗೂ ಸ್ನಾಯುಗಳಿಗೆ ಬಲ ನೀಡುವ ವಿಜ್ಞಾನವಾಗಿದೆ.

ವಿದ್ಯಾರ್ಥಿಗಳು ಫಿಸಿಯೋಥೆರಪಿ ಪದವಿ ಪಡೆದ ನಂತರ ಫಿಸಿಯೋಥೆರಪಿಸ್ಟ್‌ಗಳಾಗಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಕ್ರೀಡಾ ತಂಡಗಳಲ್ಲಿ, ಸ್ವಂತ ಕ್ಲಿನಿಕ್ ಸ್ಥಾಪಿಸುವ ಅವಕಾಶವಿದ್ದು ಹೊರ ದೇಶದಲ್ಲಿ ಕೂಡ ಅನೇಕ ಅವಕಾಶವಿರುತ್ತದೆ. ಅದಲ್ಲದೆ ಬಿಪಿಟಿ ನಂತರ ಉನ್ನತ ಶಿಕ್ಷಣಕ್ಕಾಗಿ ಎಂಪಿಟಿ ಸ್ನಾತಕೋತ್ತರ ಪದವಿಯನ್ನು ಹಾಗು ಪಿಹೆಚ್‌ಡಿ ಮಾಡುವ ಅವಕಾಶವಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಫಿಸಿಯೋಥೆರಪಿ ಉತ್ತಮವಾದ ವೃತ್ತಿಯಾಗಿದ್ದು, ನೈಪುಣ್ಯತೆ ಹೊಂದಿರುವ ಸಮರ್ಥ ವಿದ್ಯಾರ್ಥಿಗಳ ಭವಿಷ್ಯ ಉಜ್ವಲ ಹಾಗು ಸದೃಢವಾಗಿದೆ.






## ಫಿಸಿಯೋಥೆರಪಿ ಚೈತನ್ಯ ನೀಡುವ ಸಂಜೀವಿನಿ, ಭದ್ರ ಭವಿಷ್ಯದ ಬುನಾದಿ

**Phone: 080 29550568, 7975424372   E-mail: kimskhipt@gmail.com**
**Website: www.kimskhphysiotherapy.edu.in**

# ವಿಶ್ವೇಶ್ವರಪುರ ಪಿಯು ವಿಜ್ಞಾನ ಕಾಲೇಜು

ಕೆ.ಆರ್. ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು–560 004



**ಶ್ರೀ ದೇವರಾಜು (ಹಾಪ್‌ಕಾಮ್ಸ್)**
**ಅಧ್ಯಕ್ಷರು**
ಕಾಲೇಜು ಆಡಳಿತ ಮಂಡಳಿ
ವಿಶ್ವೇಶ್ವರಪುರ ವಿಜ್ಞಾನ ಕಾಲೇಜು



**ಪ್ರೊ. ಬಿ.ಎನ್.ರಮೇಶ್**
**ಪ್ರಾಂಶುಪಾಲರು**
ವಿಶ್ವೇಶ್ವರಪುರ ವಿಜ್ಞಾನ ಕಾಲೇಜು
ಕೆ.ಆರ್.ರಸ್ತೆ, ವಿ.ವಿ.ಪುರಂ, ಬೆಂಗಳೂರು–04.

ರಾಜ್ಯ ಒಕ್ಕಲಿಗರ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಅನೇಕ ವಿದ್ಯಾಸಂಸ್ಥೆಗಳಲ್ಲಿ ವಿಶ್ವೇಶ್ವರಪುರ ವಿಜ್ಞಾನ ಕಾಲೇಜು ಒಂದು. ಈ ಕಾಲೇಜು ಆರಂಭವಾದದ್ದು 1966ರಲ್ಲಿ, ಕಲೆ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜುಗಳ ಸಂಯೋಜನೆಯಲ್ಲಿ 1980ರಲ್ಲಿ ವಿಜ್ಞಾನ ಕಾಲೇಜು ತನ್ನದೆ ಆದ ಸ್ವಂತ, ಸುಸಜ್ಜಿತ ಕಟ್ಟಡವನು ಹೊಂದಿದ್ದು, ರಾಷ್ಟ್ರಕವಿ ಶ್ರೀ ಕುವೆಂಪುರವರಿಂದ ಉದ್ಘಾಟಿಸಲಾಗಿತ್ತು. ಇದು ಬೆಂಗಳೂರಿನ ಹಳೆಯ ಕಾಲೇಜುಗಳಲ್ಲಿ ಒಂದು. ಹಳ್ಳಿಗಾಡಿನಿಂದ ಬರುವಂತಹ ರೈತಾಪಿ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವುದೇ ಪ್ರಧಾನ ಗುರಿಯಾಗಿಸಿಕೊಂಡು ಸ್ಥಾಪನೆಯಾದ ಸಂಸ್ಥೆ ಇದು.

ಶಿಕ್ಷಣವನ್ನೇ ವ್ಯಾಪಾರವನ್ನಾಗಿಸಿಕೊಂಡಿರುವ ಇಂದಿನ ದಿನಗಳಲ್ಲಿ, ಪದವಿಪೂರ್ವ ಶಿಕ್ಷಣಕ್ಕೆ ಲಕ್ಷಾಂತರ ರೂ.ಗಳನ್ನು ವಸೂಲಿ ಮಾಡುತ್ತಿರುವ ದಿನಗಳಲ್ಲಿ ಅತ್ಯಂತ ಕಡಿಮೆ ಶುಲ್ಕದಲ್ಲಿ, ಮೌಲಿಕವಾದ ಶಿಕ್ಷಣಕೊಡುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ 'ವಿಶ್ವೇಶ್ವರಪುರ ವಿಜ್ಞಾನ ಕಾಲೇಜು' ಒಂದು. ಇಂಜಿನಿಯರಿಂಗ್, ವೈದ್ಯಕೀಯ, ಡೆಂಟಲ್ ಇತ್ಯಾದಿ ವೃತ್ತಿಶಿಕ್ಷಣ ಕೋರ್ಸ್‌ಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಮೂಲವಿಜ್ಞಾನವನು ಅಭ್ಯಸಿಸಲು PCMB, PCME ಇವೇ ಮೂಲಾಧಾರ. ಇಲ್ಲಿ ಕಲಿತ ವಿದ್ಯಾರ್ಥಿಗಳು ಇಂಜಿನಿಯರ್ಸ್, ವೈದ್ಯರು, ವಿಜ್ಞಾನಿಗಳಾಗಿ ಸಮಾಜದಲ್ಲಿ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗಗಳನ್ನು ನಿರ್ವಹಿಸುತ್ತಿದ್ದಾರೆ.

ಸುಸಜ್ಜಿತವಾದ ಪ್ರಯೋಗಾಲಯಗಳು, ವಿಶಾಲವಾದ ತರಗತಿ ಕೊಠಡಿಗಳು, ವ್ಯವಸ್ಥಿತವಾದ ಸಾವಿರಾರು ಗ್ರಂಥಗಳನ್ನು ಹೊಂದಿರುವ ಗ್ರಂಥಾಲಯ, ವಾಚನಾಲಯ, ಸುಸಜ್ಜಿತ ಸಭಾಂಗಣ, ಸ್ಮಾರ್ಟ್ ಕ್ಲಾಸ್‌ರೂಮ್ ಇತ್ಯಾದಿಗಳನ್ನು ಹೊಂದಿರುವ ಈ ಕಾಲೇಜು ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಹೊಂದಿದೆ.

ನಲಿಯುತ್ತಾ ಕಲಿಯುವ, ನಿಜವಾದ ಜ್ಞಾನಾಧಾರಿತ ಶಿಕ್ಷಣ ನೀಡುತ್ತಾ, ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಜಾಗೃತಗೊಳಿಸುವುದು ಶಿಕ್ಷಣದ ಆಶಯ ಎಂಬುದನ್ನು ಅರಿತು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಕ ಸಮುದಾಯ ಸದಾ ಶ್ರಮಿಸುತ್ತಾರೆ. ಅನುಭವಿ ಉಪನ್ಯಾಸಕರು ಹಾಗೂ ಯುವ ಅಧ್ಯಾಪಕರು ಗುಣಾತ್ಮಕವಾದ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಿಗೆ ನೈತಿಕ ಬೆಂಬಲ ಹಾಗೂ ಮಾನಸಿಕ ಸ್ಥೈರ್ಯವನ್ನು ತುಂಬುವುದು ತಮ್ಮ ಕರ್ತವ್ಯ ಎಂದು ಭಾವಿಸಿರುತ್ತಾರೆ.

ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಉಪನ್ಯಾಸಗಳು, ಕ್ರೀಡಾಚಟುವಟಿಕೆಗಳು ಅಂತರ ಕಾಲೇಜು ಸ್ಪರ್ಧೆಗಳು ನಿಯಮಿತವಾಗಿ ನಡೆಸುವಲ್ಲಿ ಕಾಲೇಜು ಸಕ್ರಿಯವಾಗಿರುತ್ತದೆ. ವಿದ್ಯಾರ್ಥಿಗಳಿಗಾಗಿ ಪ್ರತಿವರ್ಷ ಶೈಕ್ಷಣಿಕ ಪ್ರವಾಸವನ್ನು ಯೋಜಿಸಲಾಗುತ್ತದೆ.




ಬೆಂಗಳೂರಿನ ಹೃದಯಭಾಗದಲ್ಲಿರುವ ಈ ಕಾಲೇಜು, ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಕೆ.ಆರ್. ಮಾರುಕಟ್ಟೆಯಿಂದ ಬಸ್ ವ್ಯವಸ್ಥೆ, ಮೆಟ್ರೋ ವ್ಯವಸ್ಥೆಗಳ ಸೌಕರ್ಯವಿದೆ.

ವಿಶ್ವೇಶ್ವರಪುರ ವಿಜ್ಞಾನ(ಪಿಯು) ಕಾಲೇಜಿಗೆ ಶ್ರೀಯುತ ದೇವರಾಜು(ಹಾಪ್‌ಕಾಮ್ಸ್) ಅವರು ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದಾರೆ. ಶ್ರೀ ಬಿ.ಎನ್. ರಮೇಶ್‌ರವರು ಪಿಯು ಕಾಲೇಜಿನ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.






# ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಹಗಲು ಪದವಿ ಪೂರ್ವ ಕಾಲೇಜು

ಕೆ.ಆರ್. ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು–560 004



**ಶ್ರೀ ದೇವರಾಜು (ಹಾಪ್‌ಕಾಮ್ಸ್)**
**ಅಧ್ಯಕ್ಷರು**
ಕಾಲೇಜು ಆಡಳಿತ ಮಂಡಳಿ
ವಿಶ್ವೇಶ್ವರಪುರ ಕಾಲೇಜು



**ಪ್ರೊ. ಎಂ.ಎ. ಮಂಜುನಾಥ್**
**ಪ್ರಾಂಶುಪಾಲರು**
ವಿವಿ ಪುರ ಕಲಾ ಮತ್ತು
ವಾಣಿಜ್ಯ ಹಗಲು ಪ.ಪೂ. ಕಾಲೇಜು

ಘನತೆವೆತ್ತ ರಾಜ್ಯ ಒಕ್ಕಲಿಗರ ಸಂಘದ ಅಧೀನ ಸಂಸ್ಥೆಗಳಲ್ಲಿ ಒಂದಾದ ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಹಗಲು ಪದವಿ ಪೂರ್ವ ಕಾಲೇಜನ್ನು 1966ರಲ್ಲಿ ಆರಂಭಿಸಿದರು.




ನಗರದ ಹೃದಯ ಭಾಗದಲ್ಲಿರುವ ಕಾಲೇಜು ಅಂದಿನಿಂದ ಇಂದಿನವರೆಗೂ ಸಮಾಜಮುಖಿಯಾಗಿ ಕಾರ್ಯನಿರ್ವಹಿಸಬೇಕೆಂದು, ಎಲ್ಲಾ ವರ್ಗದವರೂ ವಿದ್ಯಾವಂತರಾಗಬೇಕೆಂಬ ಸದುದ್ದೇಶದಿಂದ ಕಡಿಮೆ ಶುಲ್ಕವನ್ನು ನಿಗದಿಪಡಿಸಿ ಸರ್ವಜನಾಂಗದ ಶಾಂತಿಯ ತೋಟವನು ಕಟ್ಟುವಲ್ಲಿ ಸಂಘದ ಸಹಕಾರ, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ದೇವರಾಜು(ಹಾಪ್‌ಕಾಮ್ಸ್)ರವರ ದೂರದೃಷ್ಟಿ, ಅದರ ಜೊತೆಗೆ ಕಾಯಾ ವಾಚಾ ಮನಸಾ ಕಾರ್ಯನಿರ್ವಹಿಸಲು ಕಂಕಣಬದ್ಧರಾಗಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಒಳಗೊಂಡ ಸುಸಜ್ಜಿತ ವಿದ್ಯಾಮಂದಿರ ನಮ್ಮ ಕಾಲೇಜು.



ಇಲ್ಲಿ ವಿದ್ಯಾಭ್ಯಾಸದ ಜೊತೆಗೆ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಹೆಚ್ಚಿನ ಗಮನವನ್ನು ನೀಡಲಾಗುತ್ತಿದೆ. ಸಾಂಸ್ಕೃತಿಕ, ಕ್ರೀಡೆ, ಅಂತರ ಕಾಲೇಜಿನಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು ಪ್ರೋತ್ಸಾಹ ನೀಡಲಾಗುತ್ತದೆ.

ನಮ್ಮ ಕಾಲೇಜಿನಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಮಾನ್ಯತೆ ಪಡೆದ ಸಂಯೋಜನೆಗಳು:

ಕಲಾ ವಿಭಾಗ : ಎಚ್.ಇ.ಪಿ.ಎಸ್.
ವಾಣಿಜ್ಯ ವಿಭಾಗ: ಎಚ್.ಇ.ಬಿ.ಎ., ಜಿ.ಇ.ಬಿ.ಎ.
ಭಾಷಾ ವಿಷಯ : ಕನ್ನಡ, ಹಿಂದಿ, ಸಂಸ್ಕೃತಿ, ತಮಿಳು ಈ ವಿಷಯಗಳನ್ನು ಬೋಧಿಸಲಾಗುತ್ತಿದೆ.

ಪ್ರಸ್ತುತ ಪ್ರಾಂಶುಪಾಲರಾದ ಎಂ.ಎ. ಮಂಜುನಾಥ್‌ರವರು ಎಲ್ಲಾ ಸಹೋದ್ಯೋಗಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು 2023–24ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳಾದ ಪ್ರತಿಭಾನ್ವೇಷಣೆ, ವಾರ್ಷಿಕ ಕ್ರೀಡಾಕೂಟ, ಕಾಲೇಜಿನ ವಾರ್ಷಿಕೋತ್ಸವ, ಬೀಳ್ಕೊಡುಗೆ ಸಮಾರಂಭವನ್ನು ಸಾಂಸ್ಕೃತಿಕ ಸಮಿತಿ ಸಂಚಾಲಕರಾದ ನಾಗರತ್ನಮ್ಮರವರು ಪ್ರಾಚಾರ್ಯರ ಸೂಚನೆಯಂತೆ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ದೇವರಾಜುರವರ ಅಧ್ಯಕ್ಷತೆ, ಅತಿಥಿಗಣ್ಯರಾದ ಇತಿಹಾಸ ತಜ್ಞರು ಪ್ರೊ. ಡಾ॥ ಹಂ.ಗು. ರಾಜೇಶ್‌ರವರ ಉಪಸ್ಥಿತಿಯಲ್ಲಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು.



ನಮ್ಮ ವಿದ್ಯಾಸಂಸ್ಥೆಯಲ್ಲಿ ಅಭ್ಯಾಸಮಾಡಿದ ಹಲವು ವಿದ್ಯಾರ್ಥಿಗಳು ಸರ್ಕಾರದ ಹಲವಾರು ಇಲಾಖೆಗಳಲ್ಲಿ ಉನ್ನತ ಪದವಿಗಳನ್ನು ಅಲಂಕರಿಸಿರುತ್ತಾರೆ. ಇನ್ನೂ ಕೆಲವರು ಸಮಾಜ ಸೇವಕರಾಗಿ, ಉದ್ಯಮಿಗಳಾಗಿ, ರಾಜಕಾರಣಿಗಳಾಗಿ, ಕಲಾವಿದರಾಗಿ, ಸಾಧನೆಯನ್ನು ಮಾಡಿದ್ದಾರೆ ಎಂದು ಹೇಳುವುದಕ್ಕೆ ಹೆಮ್ಮೆಯಾಗುತ್ತದೆ.



# ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಸಂಜೆ ಪದವಿ ಪೂರ್ವ ಕಾಲೇಜು

ಕೆ.ಆರ್. ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು–560 004



**ಶ್ರೀ ದೇವರಾಜು (ಹಾಪ್‌ಕಾಮ್ಸ್)**
**ಅಧ್ಯಕ್ಷರು**
ಕಾಲೇಜು ಆಡಳತ ಮಂಡಳ
ವಿಶ್ವೇಶ್ವರಪುರ ಕಾಲೇಜು

**ಪ್ರೊ. ರಂಗಸ್ವಾಮಿ**
**ಪ್ರಾಂಶುಪಾಲರು**
ವಿಶ್ವೇಶ್ವರಪುರ ಕಲೆ ಮತ್ತು
ವಾಣಿಜ್ಯ ಸಂಜೆ ಪದವಿ ಪೂರ್ವ ಕಾಲೇಜು



ನಮ್ಮ ಕಾಲೇಜಿನಲ್ಲಿ ಎಸ್.ಎಸ್.ಎಲ್.ಸಿ. ತದನಂತರ ನಗರ ಮತ್ತು ಗ್ರಾಮೀಣ ವಿದ್ಯಾರ್ಥಿಗಳು, ಅದರಲ್ಲಿಯೂ ಮಧ್ಯಮವರ್ಗ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳು ಉದ್ಯೋಗ ಅರಸಿಕೊಂಡು ನಗರಕ್ಕೆ ಬಂದು ಸರ್ಕಾರಿ/ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ಪಡೆದು ಉನ್ನತ ಶಿಕ್ಷಣದಿಂದ ವಂಚಿತರಾಗಿರುತ್ತಾರೆ. ಇದನ್ನು ತಪ್ಪಿಸಲು ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ನಂತರ ಹಗಲು ದುಡಿದು ಸಂಜೆ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸುವುದಕ್ಕಾಗಿ 1966–67ರಲ್ಲಿ ನಮ್ಮ ರಾಜ್ಯ ಒಕ್ಕಲಿಗರ ಸಂಘ ಸಂಸ್ಥೆಯಿಂದ ಪದವಿ/ಪದವಿ ಪೂರ್ವ ಸಂಜೆ ಕಾಲೇಜನ್ನು ಪ್ರಾರಂಭಿಸಲಾಯಿತು. ತದನಂತರ 2001–02ರಲ್ಲಿ ಪದವಿ ಕಾಲೇಜಿನಿಂದ ಬೇರ್ಪಟ್ಟು ಪ್ರತ್ಯೇಕವಾಗಿ ಕರ್ನಾಟಕ ಸರ್ಕಾರದ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಅನುಮೋದನೆಯೊಂದಿಗೆ (ಅನುದಾನಿತ) ಸಂಜೆ ಪದವಿ ಪೂರ್ವ ಕಾಲೇಜು ಇಂದಿಗೂ ಮುಂದುವರೆಯುತ್ತಾ ಬಂದಿದೆ.






ಹಗಲು ಕಾಲೇಜಿನಂತೆ ಸರಿಸಮನಾಗಿ ಸಂಜೆ ಕಾಲೇಜಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ, ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಸಹ ಒದಗಿಸುತ್ತಿದೆ. ಇದಲ್ಲದೇ ನಿರುದ್ಯೋಗ ವಿದ್ಯಾರ್ಥಿಗಳಿಗೆ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗದ ಅವಕಾಶವನ್ನು ಸಹ ಕಲ್ಪಿಸುತ್ತಿದೆ. ನಮ್ಮ ಕಾಲೇಜು ಅರ್ಧ ಶತಮಾನದ ಇತಿಹಾಸವನ್ನು ಹೊಂದಿರುತ್ತದೆ. ಈ ಸಂಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು I.A.S., I.P.S., K.A.S. ಅಧಿಕಾರಿಗಳಾಗಿ, ಕಲಾವಿದರಾಗಿ, ಕ್ರೀಡಾಪಟುಗಳಾಗಿ, ಸಾಹಿತಿಗಳಾಗಿ, ರಾಜಕಾರಣಿಗಳಾಗಿ ಹಾಗೂ ಇನ್ನು ಇತರೆ ಉನ್ನತ ಮಟ್ಟದ ಸಾಧಕರಾಗಿರುತ್ತಾರೆ. ಈ ನಮ್ಮ ಕಾಲೇಜು ಪ್ರತಿಷ್ಠಿತ ಸಂಸ್ಥೆ ರಾಜ್ಯ ಒಕ್ಕಲಿಗರ ಸಂಘದ ಬೆಂಗಳೂರಿನ ಹೃದಯ ಭಾಗದಲ್ಲಿದೆ. ಇಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಅತ್ಯಂತ ಕಡಿಮೆ ಶುಲ್ಕವಿರುತ್ತದೆ.



ಉದ್ಯೋಗಿಗಳಿಗೆ, ವಿದ್ಯಾಭ್ಯಾಸ ಅರ್ಧಕ್ಕೆ ನಿಂತವರಿಗೆ, ಬಡ್ತಿ ಆಕಾಂಕ್ಷಿಗಳಿಗೆ, ಕಾರ್ಮಿಕ ಮಕ್ಕಳಿಗೆ ಹಾಗೂ ರೈತಾಪಿ ಕುಟುಂಬದವರಿಗೆ ಈ ಕಾಲೇಜಿನಲ್ಲಿ ಉತ್ತಮ ಅವಕಾಶವಿದ್ದು ವಿದ್ಯಾರ್ಥಿಗಳ ಭವಿಷ್ಯದ ದಾರಿದೀಪವಾಗಿದೆ.





# ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು

ಶ್ರೀಗಂಧದಕಾವಲು, ಮಾಗಡಿ ರಸ್ತೆ, ಬೆಂಗಳೂರು–560 091



**ಶ್ರೀ ಬಿ.ಪಿ. ಮಂಜೇಗೌಡ**
ಕಾರ್ಯಾಧ್ಯಕ್ಷರು
**ಅಧ್ಯಕ್ಷರು,** ಶ್ರೀಗಂಧದಕಾವಲು ವಿದ್ಯಾಸಂಸ್ಥೆಗಳು,
ಫಾರ್ಮಸಿ, ಕೆ.ಐ.ಪಿ.ಟಿ. ಮತ್ತು ಕೆ.ಹೆಚ್.ಐ.ಪಿ.

**ಪ್ರೊ. ಜಯಪ್ರಕಾಶ್ ಹೆಚ್.ಎಂ.** M.Com.
ಪ್ರಾಂಶುಪಾಲರು
ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು
ಕೊಟ್ಟಿಗೆಪಾಳ್ಯ, ಬೆಂಗಳೂರು-91.



ನಮ್ಮ ಶ್ರೀಗಂಧದ ಕಾವಲು ಪದವಿ ಪೂರ್ವ ಕಾಲೇಜು ಪ್ರತಿಷ್ಠಿತ ಸಂಸ್ಥೆಯಾದ ರಾಜ್ಯ ಒಕ್ಕಲಿಗರ ಸಂಘದ ಅಂಗ ಸಂಸ್ಥೆಯಾಗಿ 1982–1983 ಶೈಕ್ಷಣಿಕ ಸಾಲಿನಲ್ಲಿ ಬಡ ಮಕ್ಕಳಿಗೆ, ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಸುಲಭ ದರದಲ್ಲಿ ವಿದ್ಯಾಭ್ಯಾಸ ನೀಡುವ ದೂರದೃಷ್ಠಿಯಿಂದ ಒಕ್ಕಲಿಗರ ಸಂಘದ ಹಿರಿಯ ಚೇತನರು ಮಾಗಡಿ ಮುಖ್ಯರಸ್ತೆ, ಶ್ರೀಗಂಧದಕಾವಲಿನ ಎತ್ತರವಾದ ಸುಂದರ ಗ್ರಾಮೀಣ ಪ್ರದೇಶದಲ್ಲಿ ಸುಸಜ್ಜಿತ ಕಟ್ಟಡದಲ್ಲಿ ಆರಂಭಿಸಿದರು. ಶ್ರೀಗಂಧದಕಾವಲು ಪ.ಪೂ. ಕಾಲೇಜು ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಆರಂಭವಾಯಿತು. ಮುಂದೆ 1989ರಲ್ಲಿ ಸರ್ಕಾರದ ಅನುದಾನಕ್ಕೆ ಒಳಪಟ್ಟು ಅದೇ ವರ್ಷದಲ್ಲಿ ವಿಜ್ಞಾನ ವಿಭಾಗವನ್ನು ಸೇರ್ಪಡಿಸಿಕೊಂಡಿತು. 2018–19ನೇ ಶೈಕ್ಷಣಿಕ ವರ್ಷದಲ್ಲಿ ಹೆಚ್ಚುವರಿಯಾಗಿ ಗಣಕ ವಿಜ್ಞಾನ ವಿಷಯವನ್ನು ಸೇರ್ಪಡಿಸಿಕೊಂಡಿತು. ಪ್ರಸ್ತುತ ನಮ್ಮ ಕಾಲೇಜಿನ ಕಲಾ ವಿಭಾಗದಲ್ಲಿ HEPS ವಾಣಿಜ್ಯ ವಿಭಾಗದಲ್ಲಿ HEBA, CEBA ವಿಜ್ಞಾನ ವಿಭಾಗದ PCMB ಯಲ್ಲಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಸುಸಜ್ಜಿತವಾದ ಭೌತಶಾಸ್ತ್ರ ರಸಾಯನ ಶಾಸ್ತ್ರ, ಜೀವಶಾಸ್ತ್ರ, ಗಣಕಯಂತ್ರ ಪ್ರಯೋಗಾಲಯಗಳು ವಿಶಾಲವಾದ ಆಟದ ಮೈದಾನ ವ್ಯವಸ್ಥಿತವಾದ ಗ್ರಂಥಾಲಯವನ್ನು ಹೊಂದಿದೆ.

ಶ್ರೀಗಂಧದ ಕಾವಲು ಪದವಿ ಪೂರ್ವ ಕಾಲೇಜಿನ ಸಂಸ್ಥಾಪಕ ಪ್ರಾಚಾರ್ಯರಾದ ಶ್ರೀಯುತ ಸಿದ್ದರಾಮಯ್ಯ ನವರು ಸುಮಾರು 23 ವರ್ಷಗಳ ಕಾಲ ಪ್ರಾಚಾರ್ಯರಾಗಿ ಆಡಳಿತ ನಡೆಸಿ ನಮ್ಮ ಕಾಲೇಜಿಗೆ ಸುಭದ್ರವಾದ ಅಡಿಗಲ್ಲು ಹಾಕಿಕೊಟ್ಟಿದ್ದಾರೆ. ನಂತರ ಪ್ರಾಚಾರ್ಯರಾಗಿ ಬಂದಂತಹ ಶ್ರೀಯುತ ಸಿ.ಕೆ. ಗುರುಲಿಂಗಯ್ಯ, ಶ್ರೀಯುತ ಬಿ.ಈ. ಮಂಜಪ್ಪ, ಶ್ರೀಯುತ ವೈ. ಜಯರಾಮ್, ಶ್ರೀಯುತ ರಾಮಕೃಷ್ಣ ಕಾಲೇಜನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುವಲ್ಲಿ ಹಾಸುಗಂಬಿಯಾಗಿದ್ದಾರೆ. ಶ್ರೀ ವೈ. ಜಯರಾಮರ ಆಡಳಿತದಲ್ಲಿ ನಮ್ಮ ಕಾಲೇಜಿಗೆ ವಾಣಿಜ್ಯ ವಿಭಾಗದಲ್ಲಿ ಕಂಪ್ಯೂಟರ್ ವಿಭಾಗವನ್ನು ತೆರೆಯಲಾಯಿತು.

ಪ್ರಸ್ತುತ ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀಯುತ ಜಯಪ್ರಕಾಶ್ ಹೆಚ್.ಎಂ. ರವರು ಎಲ್ಲಾ ಸಹೋದ್ಯೋಗಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆಡಳಿತ ನಡೆಸುತ್ತಿದ್ದಾರೆ. ಸಹ ಸಿಬ್ಬಂದಿಗಳಿಗೆ ನಿರಂತರ ಪ್ರೇರಣೆ ಹಾಗೂ ಉತ್ತಮ ಆಶಯಗಳಿಂದ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ವರ್ಷವಿಡೀ ಚಟುವಟಿಕೆಗಳಲ್ಲಿ ತೊಡಗಿರಲು ಸಾಧ್ಯವಾಗಿದೆ. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಜೂನ್ 21, 2023ರಂದು ವಿಶ್ವ ಯೋಗ ದಿನದ ಪ್ರಯುಕ್ತ ಸಂಯಮ ಟ್ರಸ್ಟ್ ಯೋಗ ರಿಸರ್ಚ್ ಫೌಂಡೇಶನ್ ಮತ್ತು ನಮ್ಮ ಕಾಲೇಜಿನ ಸಹಯೋಗದಲ್ಲಿ 03 ದಿನಗಳ ಕಾಲ ಯೋಗ ಮತ್ತು ಧ್ಯಾನ ತರಭೇತಿ ನೀಡಿ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು.

2021–22ರ ಶೈಕ್ಷಣಿಕ ವರ್ಷದಲ್ಲಿ Anti-Drug Club ನ್ನು ನಮ್ಮ ಕಾಲೇಜಿನಲ್ಲಿ ಪ್ರಾಂಶುಪಾಲರಾದ ಜಯಪ್ರಕಾಶ್ ಹೆಚ್.ಎಂ. ರವರು ಆರಂಭಿಸಿದರು. ಈ ಶಾಖೆಯ ಅಡಿಯಲ್ಲಿ ಮತ್ತು ಕಾಮಾಕ್ಷಿಪಾಳ್ಯ





ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಭಿರಾಣಿ ಎಂ.ಎನ್. ಕದಂ ಆತಿಥ್ಯದೊಂದಿಗೆ ದಿನಾಂಕ 26.06.2023 ರಂದು ಅಂತರರಾಷ್ಟ್ರೀಯ ಮಾಧಕ ವಸ್ತುಗಳ ವಿರೋಧಿ ದಿನಾಚರಣೆ ಆಚರಿಸಲಾಯಿತು. ಹದಿಹರೆಯದ ವಯಸ್ಸಿನ ಮಕ್ಕಳಿಗೆ ಮಾಧಕ ವಸ್ತುಗಳ ವ್ಯಸನದಿಂದ ಉಂಟಾಗುವ ಅಪಾಯಗಳ ಬಗ್ಗೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಮನಮುಟ್ಟುವಂತೆ ತಿಳಿಸಲಾಯಿತು. ಆದ ಕಾರಣಕ್ಕೆ ನಮ್ಮ ಕಾಲೇಜು ಮಾದಕ ವಸ್ತುಗಳ ಮುಕ್ತ ಕಾಲೇಜು ಎಂದು ಹೆಸರಿಸಲಾಗಿದೆ.

ಆಗಸ್ಟ್ 28, 2023ರಲ್ಲಿ ನಿಮಾನ್ಸ್ ಆಸ್ಪತ್ರೆ ವತಿಯಿಂದ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ಕಾರ್ಯಕ್ರಮ, ಸೆಪ್ಟಂಬರ್ 23, 2023 ರಂದು ಮೋದಿ ಕಣ್ಣಿನ ಆಸ್ಪತ್ರೆಯ ವತಿಯಿಂದ ವಿದ್ಯಾರ್ಥಿಗಳಿಗೆ ಉಚಿತ ಕಣ್ಣಿನ ತಪಾಸಣೆ ಮತ್ತು ಉಚಿತ ಕನ್ನಡಕ ನೀಡುವ ಕಾರ್ಯಕ್ರಮ ಇನ್ನು ಮುಂತಾದ ಇಂತಹ ಅದ್ಭುತ ಕಾರ್ಯಕ್ರಮಗಳ ಜೊತೆಗೆ ಫ್ರೆಶರ್ಸ್ ಡೇ, ಗಣೇಶ ಹಬ್ಬದ ಆಚರಣೆ ಉತ್ತಮ ಶೈಕ್ಷಣಿಕ ಸ್ಥಳಗಳಿಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳುವುದು, ಡಿಸೆಂಬರ್ 26 ರಂದು ಗ್ರಾಮೀಣನೊಂದ ವಿದ್ಯಾರ್ಥಿನಿಯ ಬದುಕು ಬದಲಾಯಿಸಿದ 'ತನುಜಾ' ಚಲನಚಿತ್ರ ಪ್ರದರ್ಶನ, ನವೆಂಬರ್ 22 ಮತ್ತು 23 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಮಕ್ಕಳಿಗೆ ತೋರಿಸಿದ ಕನ್ನಡ ಪಠ್ಯಕ್ಕೆ ಸಂಬಂಧಿಸಿದ ಪೂರ್ಣಚಂದ್ರ ತೇಜಸ್ವಿಯವರ ಕೃಷ್ಣೇಗೌಡರ ಆನೆ ಮತ್ತು ಡಾ॥ ಚಂದ್ರಶೇಖರ್ ಕಂಬಾರರ ಬೋಳೇಶಂಕರ ನಾಟಕ ಪ್ರದರ್ಶನ ಹೀಗೆ ಹತ್ತಾರು ವೈವಿಧ್ಯಮಯವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರತಿ ವರ್ಷವು ಜರುಗುತ್ತಿರುತ್ತವೆ. ಈ ಕಾರಣದಿಂದಲೇ ನಮ್ಮ ಕಾಲೇಜಿನ ಮಕ್ಕಳು ಪ್ರಬಂಧ ಸ್ಪರ್ಧೆ ಮತ್ತು ರಸಪ್ರಶ್ನೆ ಸ್ಪರ್ಧೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ವಿಜೇತರಾಗಿ ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿದ್ದರು.

ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ರೀತಿಯೇ ಕ್ರೀಡಾಕಾರ್ಯಕ್ರಮಗಳು ನಮ್ಮ ಕಾಲೇಜಿನಲ್ಲಿ ವರ್ಷದುದ್ದಕ್ಕೂ ಜರುಗುತ್ತಿರುತ್ತವೆ. ಆಗಸ್ಟ್ 17, 18, 19ರ 03 ದಿನಗಳು ಜರುಗಿದ ಬೆಂಗಳೂರು ಉತ್ತರ ಜಿಲ್ಲಾ ವಿಭಾಗದ ಕಬಡ್ಡಿ ಸ್ಪರ್ಧೆಗೆ ನಮ್ಮ ಕಾಲೇಜಿನಿಂದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ತಂಡಗಳು ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿವೆ. ಆಗಸ್ಟ್ 23 ರಂದು ಜರುಗಿದ ಬಾಲಕಿಯರ ಜಿಲ್ಲಾ ಮಟ್ಟದ ಖೋ ಖೋ ಪಂದ್ಯಗಳಿಗೆ ಭಾಗವಹಿಸಿ ನಮ್ಮ ಕಾಲೇಜು ವಿದ್ಯಾರ್ಥಿನಿಯರ ತಂಡ ಉತ್ತಮ ಪ್ರದರ್ಶನ ನೀಡಿತು. ಈ ವಿದ್ಯಾರ್ಥಿನಿಯರಲ್ಲಿ ಶ್ರೀದೇವಿ ಮತ್ತು ರಂಜಿತ ವಿದ್ಯಾರ್ಥಿನಿಯರು ರಾಜ್ಯಮಟ್ಟಕ್ಕೆ ಆಯ್ಕೆಯಾದರು. ಅದರಲ್ಲಿ ಶ್ರೀದೇವಿ ಎಂಬ ವಿದ್ಯಾರ್ಥಿನಿಯು ರಾಷ್ಟ್ರಮಟ್ಟದ ಖೋಖೋ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಇದು ಕಾಲೇಜಿಗೆ ರಾಜ್ಯ ಒಕ್ಕಲಿಗರ ಸಂಘಕ್ಕೆ ಮತ್ತು ಪದವಿಪೂರ್ವ ಶಿಕ್ಷಣ ಇಲಾಖೆಗೆ ಕೀರ್ತಿತರುವ ವಿಷಯವಾಗಿದೆ.







ಹೀಗೆ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಕ್ರೀಡಾ ಚಟುವಟಿಕೆಯಲ್ಲಿ ವರ್ಷದುದ್ದಕ್ಕೂ ಕ್ರಿಯಾ ಶೀಲರಾಗಿರುವ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕ ವರ್ಗದವರಿಗೆ ಕಾಲೇಜು ವಾರ್ಷಿಕೋತ್ಸವ ಶೈಕ್ಷಣಿಕ ವರ್ಷದ ಮುಕ್ತಾಯ ಸಮಾರಂಭದಂತೆ, ಈ ಸಮಾರಂಭವು ಶ್ರೀಗಂಧೋತ್ಸವ ಎಂದು ಹೆಸರಿಟ್ಟು ಹಲವು ವರ್ಷಗಳಿಂದ ಅದ್ದೂರಿಯಾಗಿ ಆಚರಿಸಿಕೊಂಡು ಬರುತ್ತಿದ್ದಾರೆ. 2023–24ನೇ ಶೈಕ್ಷಣಿಕ ಸಾಲಿನ ಶ್ರೀಗಂಧೋತ್ಸವ ಕಾರ್ಯಕ್ರಮ ಜನವರಿ 05 ರಂದು ನಡೆಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸನ್ಮಾನ್ಯ ಶ್ರೀ ಬಿ.ಪಿ. ಮಂಜೇಗೌಡರು ಅಧ್ಯಕ್ಷರು, ಶ್ರೀಗಂಧದಕಾವಲು ವಿದ್ಯಾಸಂಸ್ಥೆಗಳು, ಉದ್ಘಾಟನೆ ಸನ್ಮಾನ್ಯ ಶ್ರೀ ಡಿ. ಹನುಮಂತಯ್ಯನವರು, ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ, ಘನ ಉಪಸ್ಥಿತಿ ಸನ್ಮಾನ್ಯ ಶ್ರೀ ಬಿ. ಕೆಂಚಪ್ಪಗೌಡರು, ಗೌರವ ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ, ಸನ್ಮಾನ್ಯ ಶ್ರೀ ಹೆಚ್.ಸಿ. ಜಯಮುತ್ತುರವರು, ಪ್ರಧಾನ ಕಾರ್ಯದರ್ಶಿಗಳು ರಾಜ್ಯ ಒಕ್ಕಲಿಗರ ಸಂಘ, ಸನ್ಮಾನ್ಯ ಶ್ರೀ ಸಿ.ಎಂ. ಮಾರೇಗೌಡರು, ಖಜಾಂಚಿಗಳು ರಾಜ್ಯ ಒಕ್ಕಲಿಗರ ಸಂಘ, ಶ್ರೀ ದೇವರಾಜು (ಹಾಪ್‌ಕಾಮ್ಸ್) ಉಪಾಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ, ಶ್ರೀ ಎಲ್. ಶ್ರೀನಿವಾಸ್, ಉಪಾಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ, ಶ್ರೀ ವೆಂಕಟರಾಮೇಗೌಡರು, ಜಂಟಿ ಕಾರ್ಯದರ್ಶಿಗಳು, ರಾಜ್ಯ ಒಕ್ಕಲಿಗರ ಸಂಘ, ಇವರುಗಳ ಸಮ್ಮುಖದಲ್ಲಿ ಅದ್ದೂರಿಯಾಗಿ ಜರುಗಿತ್ತು. ಈ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಶೈಕ್ಷಣಿಕ ಮತ್ತು ಕ್ರೀಡೆಯಲ್ಲಿ ಸಾಧನೆ ತೋರಿದ ಮಕ್ಕಳಿಗೆ ಬಹುಮಾನ ನೀಡಿ ಗೌರವಿಸಲಾಯಿತು.



ಶ್ರೀಗಂಧದಕಾವಲು ಪ.ಪೂರ್ವ ಕಾಲೇಜು ಸಿಲಿಕಾನ್ ನಗರ ಬೆಂಗಳೂರಿನ ಹೃದಯ ಭಾಗದಲ್ಲಿದ್ದು, ಯಾವುದೇ ಆರ್ಥಿಕ ಲಾಭದ ದೃಷ್ಟಿಕೋನ ಇಟ್ಟುಕೊಳ್ಳದೇ ಕೇವಲ ಸೇವಾ ಮನೋಭಾವದಿಂದ ನಡೆಸಲಾಗುತ್ತಿರುವ ಈ ಕಾಲೇಜು ಕಳೆದ ಸುಮಾರು 40 ವರ್ಷಗಳಿಂದಲೂ ಸುತ್ತಲ ಬಡ, ಕಾರ್ಮಿಕ ಮತ್ತು ಕೂಲಿಕಾರ ವರ್ಗದ ಮಕ್ಕಳಿಗೆ ಶಿಕ್ಷಣ ನೀಡುತ್ತಾ ಬಂದಿದೆ. ಈ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರಮಟ್ಟದ ಸರ್ಕಾರದ ಉನ್ನತ ಪದವಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅಷ್ಟೇ ಅಲ್ಲದೇ ಈ ಭಾಗದ ಬಹುತೇಕ ಉದ್ಯಮಿಗಳು, ಸಮಾಜ ಸೇವಕರು ಮತ್ತು ರಾಜಕಾರಣಿಗಳು ನಮ್ಮ ಕಾಲೇಜಿನ ವಿದ್ಯಾರ್ಥಿಗಳಾಗಿದ್ದಾರೆ. ಅದರಲ್ಲೂ ನಮ್ಮ ಕಾಲೇಜು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ವಿಶೇಷ ಆದ್ಯತೆ ನೀಡುತ್ತದೆ. ಪ್ರತಿ ವರ್ಷದ ಕಾಲೇಜು ದಾಖಲಾತಿಯಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಗಿದ್ದು 2022–23ನೇ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶದಲ್ಲಿ ಹೆಣ್ಣು ಮಕ್ಕಳೇ ಮೇಲುಗೈ ಸಾಧಿಸಿದ್ದು, ಬಂದ 10 Distinction ಗಳಲ್ಲಿ 07 ವಿದ್ಯಾರ್ಥಿನಿಯರೇ ಇರುವುದು ವಿಶೇಷವಾಗಿದೆ. ಹೆಣ್ಣು ಮಕ್ಕಳಿಗೆ ನಾವು ನೀಡುವ ಆದ್ಯತೆಯಾಗಿದೆ. ಮಹಿಳೆಯರ ಸ್ವಾವಲಂಬಿ ಬದುಕಿಗೆ ನಮ್ಮ ಪದವಿ ಪೂರ್ವ ಕಾಲೇಜು ಆಸರೆಯಾಗಿದೆ.




**ರಾಷ್ಟ್ರಮಟ್ಟದ ಖೋಖೋ ಸ್ಪರ್ಧೆಗೆ ಆಯ್ಕೆಯಾಗಿರುವ ವಿದ್ಯಾರ್ಥಿನಿ 'ಶ್ರೀದೇವಿ'**

ಈ ಎಲ್ಲಾ ಸಾಧನೆಗಳಿಗೆ ರಾಜ್ಯ ಒಕ್ಕಲಿಗರ ಸಂಘ ಪದಾಧಿಕಾರಿಗಳು ಶ್ರೀಗಂಧದಕಾವಲು ವಿದ್ಯಾ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಬಿ.ಪಿ. ಮಂಜೇಗೌಡರು ನಮ್ಮ ಕಾಲೇಜಿಗೆ ನೀಡುವ ವಿಶೇಷ ಕಾಳಜಿಯೇ ಕಾರಣವಾಗಿದೆ. ಈ ಎಲ್ಲಾ ಮಹಾಶಯರ ಕೃಪೆಯಿಂದಾಗಿ 2023–24ನೇ ಸಾಲಿನಲ್ಲಿ ಕಾಲೇಜು ಮಾನ್ಯತೆ ನವೀಕರಣಕ್ಕಾಗಿ ನಮ್ಮ ಕಾಲೇಜಿಗೆ ಫೈರ್‌ಸೇಫ್ಟಿ ಉಪಕರಣಗಳನ್ನು ಅಳವಡಿಸಲಾಗಿದೆ. ಹೀಗೆ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬೇಕಾಗಿರುವ ಎಲ್ಲಾ ಉತ್ತಮ ಮೂಲ ಸೌಕರ್ಯಗಳನ್ನು ಹೊಂದಿರುವ ನಮ್ಮ ಕಾಲೇಜು ವರ್ಷದಿಂದ ವರ್ಷಕ್ಕೆ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳುತ್ತಿದೆ. ಮುಂದೊಂದು ದಿನ ರಾಜ್ಯ ಒಕ್ಕಲಿಗರ ಸಂಘಕ್ಕೆ ಈ ಪದವಿಪೂರ್ವ ಕಾಲೇಜು ಕಿರೀಟಪ್ರಾಯವಾಗುತ್ತದೆ.

ಲೇಖನ: **ರಂಗಸ್ವಾಮಿ ಎನ್**
ಕನ್ನಡ ಉಪನ್ಯಾಸಕರು
ಶ್ರೀಗಂಧದಕಾವಲು ಪದವಿ ಪೂರ್ವ ಕಾಲೇಜು



## ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಹಳೆಯ ವಿದ್ಯಾರ್ಥಿಗಳ ಸಂಘದಿಂದ

# 44ನೇ ಸಂಸ್ಥಾಪಕರ ದಿನಾಚರಣೆ












ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಹಳೆಯ ವಿದ್ಯಾರ್ಥಿಗಳ ಸಂಘದಿಂದ 44ನೇ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು, ಮುಖ್ಯ ಅತಿಥಿಗಳಾಗಿ ಮಾನ್ಯ ದಿನೇಶ್ ಗುಂಡೂರಾವ್ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕುಣಿಗಲ್ ಕ್ಷೇತ್ರದ ಶಾಸಕರಾದ ಡಾ. ರಂಗನಾಥ್ ಕಾರ್ಯಕ್ರಮವನ್ನು ಉದ್ಘಾಟಿಸಿದರು, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾದ ಶ್ರೀ. ಡಿ ಹನುಮಂತಯ್ಯರವರು, ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯದ ಅಧ್ಯಕ್ಷರಾದ ಡಾ.ವಿ.ನಾರಾಯಣಸ್ವಾಮಿಯವರು, ಕೆಂಪೇಗೌಡ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷರಾದ ಶ್ರೀ ನೆಲ್ಲಿಗೆರೆಬಾಲುರವರು, ನಿರ್ದೇಶಕರಾದ ಡಾ.ಅಂಜನಪ್ಪರವರು, ಪ್ರಾಂಶುಪಾಲರಾದ ಡಾ.ಭಗವಾನ್‌ರವರು ಹಾಗೂ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ಡಾ.ಗೋಪಾಲ್‌ರವರು ಉಪಸ್ಥಿತರಿದ್ದರು.

VOKKALIGARA PATHRIKE(KANNADA MONTHLY) KARKAN/2010/37125 MARCH 2024





# ಕೆಂಪೇಗೌಡ ಆಸ್ಪತ್ರೆ

- ನುರಿತ ವೈದ್ಯರ ಸೇವೆ.
- ಇನ್ಶ್ಯೂರೆನ್ಸ್ ಸೌಲಭ್ಯ.
- ಕೈಗೆಟುಕುವ ದರದಲ್ಲಿ ಚಿಕಿತ್ಸೆ.
- ದಿನದ 24 ಗಂಟೆಯು ಲಭ್ಯ.
- ವಿಶೇಷ ತುರ್ತು ಚಿಕಿತ್ಸಾ ಘಟಕ.

ರಾಜ್ಯ ಒಕ್ಕಲಿಗರ ಸಂಘದ ಅಧಿಕೃತ ಸಾಮಾಜಿಕ ಜಾಲತಾಣಗಳಿಗಾಗಿ
QR Code ಸ್ಕ್ಯಾನ್ ಮಾಡಿ




ವಿಳಾಸ: ಕಿಮ್ಸ್ ಆಸ್ಪತ್ರೆ, ವಿ.ವಿ. ಪುರ, ಕೆ.ಆರ್. ರಸ್ತೆ, ಬೆಂಗಳೂರು–560004
ದೂರವಾಣಿ ಸಂಖ್ಯೆ: 080–26620036, 26624870, 26672976, 26672998

VOKKALIGARA PATHRIKE – Printed, Published and Edited by D. Hanumanthaiah on behalf of Rajya Vokkaligara Sangha.
Printed at Vivek Colors, #4, 7th A Main, Magadi Road, Bengaluru - 560023. Published at # 148, Rajya Vokkaligara Sangha,
K.R. Road, V.V. Puram, Bengaluru - 560 004.